ಶ್ರೀ ಎಚ್. ಸಿದ್ದವೀರಪ್ಪ.—ಉರಿಗಾಂ ಗೋಲ್ಡ್ ಮೈನಿಂಗ್ ಕಂಪೆನಿಯನ್ನು ಮುಚ್ಚಿದ ಪ್ರಯುಕ್ತ alternative employment ನ್ನು ಏರ್ಪಾಡು ಮಾಡುವುದು ನೂಕ್ತವೆಂದು ಮಾಧವರಾಯರ ಸಮಿತಿಯವರು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೆ ಪದೇ ಪದೇ ಆ ಕ್ಷೇತ್ರದ ಜನರು ಇನ್ನೊಂದು ಕೈಗಾರಿಕೆಯನ್ನು ಆವರಿಗೆ ಒದಗಿಸಿಕೊಡಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರ ಮುಂದೆ ಇಡುತ್ತಿದ್ದಾರೆ. ಆದ್ದರಿಂದ ಈ ಸಮಿತಿಯನ್ನು ಮಾಡುವ ಅವಶ್ಯಕತೆ ಬಂತು.

ಶ್ರೀ ಕೆ. ಪುಟ್ಟಸ್ವಾಮಿ.—ಈ ಮೈನಿಂಗ್ ಕಂಪೆನಿಗಳವರು ಕೆಲಸಗಳನ್ನು ಕೊಡುವಷ್ಟು ಶಕ್ತಿ ಪಡೆದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಅವಕಾಶ ವಿದೆಯೋ ಅಷ್ಟು ಕೆಲಸಗಳನ್ನು ಕಂಪೆನಿಗಳವರು ಕೊಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ, "They were absolutely non-co-operative" ಎಂದು ಹೇಳಿದ್ದೀರಿ. ಅಂತಹ non-co-operative attitude ನಿಂದ ಏನಾದರೂ ಈ ಸಮಿತಿಯನ್ನು ನೇಮಕ ಮಾಡುವ ಅವಶ್ಯಕತೆ ಬಂತೇ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಅಂತಹ non-co-operating attitude ತೋರಿಸಿಲ್ಲ.

Silk grainage near Devanahalli.

Q.—145. **Sri R. MUNISWAMIAH** (Bangalore North—Scheduled Castes).—

Will the Government be pleased to state:—

(*a*) whether they have thought of starting a silk grainage near Devanahalli;

(*b*) the amount spent on this scheme by this time;

(*c*) the amount that the Central Government has sanctioned towards this?

A.—**Sri H. SIDDAVEERAPPA** (Minister for Home and Industries).—

(*a*) The Department has started a grainage from the year 1951-52.

(*b*)

		Rs.	a.	p.
1951-52	...	1,042	8	0
1952-53	...	787	12	0
1953-54	...	741	15	6

(*c*) The Central Government have not sanctioned any amount for this purpose. The entire expenditure is borne by the Government of Mysore.

ಶ್ರೀ ಆರ್. ಮುನಿಸ್ವಾಮಯ್ಯ.—ದೇವನಹಳ್ಳಿಯಲ್ಲಿ ಗೌರ್ನಮೆಂಟ್ ಗ್ರೈನೇಜ್ ಪ್ರಾರಂಭಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ದೇವನಹಳ್ಳಿಯಲ್ಲ ಒಂಬು ಗೌರ್ನಮೆಂಟ್ ಗ್ರೈನೇಜ್ ಇದೆಯಲ್ಲ?

ಶ್ರೀ ಆರ್. ಮುನಿಸ್ವಾಮಯ್ಯ.—ಸರ್ಕಾರದವರು ಗುಡುವನಹಳ್ಳದ ಬಳಿ ಒಂದು ಗ್ರೈನೇಜ್ ಸೆಂಟರ್ ಸ್ಥಾಪನೆ ಮಾಡಿದ್ದಾರಲ್ಲವೆ?

Sri H. SIDDAVEERAPPA.—There is a proposal to start a centre entirely for foreign cocoons.

ಶ್ರೀ ಆರ್. ಮುನಿಸ್ವಾಮಯ್ಯ.—ಅದಕ್ಕೆ ಇಂಡಿಯಾ ಸರ್ಕಾರದವರು ಏನು ಸಹಾಯ ಒದಗಿಸಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸ್ಕೀಮನ್ನು examine ಮಾಡಿ Central Silk Boardನವರು 67 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಕೆಲಸ ನಡೆಸುತ್ತಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಅಲ್ಲಿ ಪರೀಕ್ಷಾರ್ಥವಾಗಿ ಭಾವಿಗಳನ್ನು ತೆಗೆಸಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಆದಷ್ಟು ಜಾಗ್ರತೆ ಇದನ್ನು finalise ಮಾಡಿ ಕೆಲಸ ನಡೆಸಬೇಕೆಂದಿದ್ದೇವೆ.

Standard Weights and Measures.

Q.—158. **Sri KOTRA BASAVANA GOUD** (Kudligi).—

Will the Government be pleased to state:—

whether it is the intention of the Government to introduce standard weights and measures throughout the State immediately?

A.—**Sri H. SIDDAVEERAPPA** (Minister for Home and Industries).—Standard weights and measures are in use throughout the State.

ಶ್ರೀ ಕೊಟ್ರ ಬಸವನಗೌಡ.—ರೂಲ್‌ಗಳನ್ನು ಕಟ್ಟು ನಿಟ್ಟಾಗಿ ಜಾರಿ ಮಾಡಿದ್ದೀರಾ?

*ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತಿದ್ದೇವೆ.

ಶ್ರೀ ಕೊಟ್ರ ಬಸವನಗೌಡ.—ಬೆಲ್ಲ, ಮೆಣಸಿನ ಕಾಯಿ, ಎಣ್ಣೆ, ಇವುಗಳನ್ನು ಯಾವ ತೂಕದಲ್ಲಿ ಕೊಡುತ್ತಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಇವುಗಳನ್ನು standard weight ಗಳಲ್ಲಿ ಮಾರುತ್ತಾರೆ.

ಶ್ರೀ ಕೊಟ್ರ ಬಸವನಗೌಡ.—ಬೇರೆ ಬೇರೆ ಗ್ರಾಮಗಳಲ್ಲಿ ಬೇರೆ ಬೇರೆ ತೂಕಗಳಲ್ಲಿ ಮಾರುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—Standard weight ಇಲ್ಲಿಗೆ ಅನ್ವಯಿಸುವುದಿಲ್ಲ. ಒಂದು ಕಡೆ 10 ಸೇರು ದಡೆ ಇರಬಹುದು. ಇನ್ನೊಂದು ಕಡೆ 12 ಸೇರು ದಡೆ ಇರಬಹುದು. ಹೀಗೆ ಬೇರೆ ಬೇರೆ ಇರಬಹುದು; ಆದರೆ standard weight specification ಒಂದೇ.

ಶ್ರೀ ಕೊಟ್ರ ಬಸವನಗೌಡ.—ತೂಕ ಬೇರೆ ಬೇರೆ ಇರುವುದರಿಂದ ಮೋಸಮಾಡುವುದಕ್ಕೆ ಅವಕಾಶವಾಗುತ್ತದೆಯೇ? ಒಂದು ದಡೆ 10 ಸೇರು ಇರಬೇಕೆಂದು ರೂಲ್ಸ್ enforce ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ನಭೆ ಮುಂದೆ ಇದಕ್ಕೆ ಸಂಬಂಧಪಟ್ಟ ಬಿಲ್ಲು ಇದೆ. ಅದು ಪಾಸ್ ಆದ ಕೂಡಲೇ ಜಾರಿಗೆ ತರುತ್ತೇವೆ.